# ಮೈಸೂರು ವಿಶ್ವವಿದ್ಯಾನಿಲಯ

Estd 1916

(Re-accredited by NAAC with CGPA 3.47 on four point scale with A Grade)

ಸಂಖ್ಯೆ: ಪವಿ/8.6/07/ಅಧಿಸೂಚನೆ/2015-16

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005
ದಿನಾಂಕ: 09-06-2022

## ಅಧಿಸೂಚನೆ

ವಿಷಯ: ಆಗಸ್ಟ್-2022ರ ಮಾಹೆಯಲ್ಲಿ ಜರುಗಲಿರುವ ವಾರ್ಷಿಕ ಪದ್ಧತಿಯ ಸ್ನಾತಕ ಪದವಿ ಪರೀಕ್ಷೆಯ ಬಗ್ಗೆ.

ಉಲ್ಲೇಖ: 1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಅಧಿಸೂಚನೆ ಸಂಖ್ಯೆ:ಎಸಿ2(ಎಸ್)/13/2021-22, ದಿನಾಂಕ:13-07-2021 (ಪರೀಕ್ಷಾ ಶುಲ್ಕಗಳಿಗೆ ಸಂಬಂಧಿಸಿರುವುದು).

2. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಅಧಿಸೂಚನೆ ಸಂಖ್ಯೆ:ಎಸಿ2(ಎಸ್)/34/1990-91, ದಿನಾಂಕ:13-09-2021 (ಹಳೆಯ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಿರುವ ಸಂಬಂಧ).

*****

ಆಗಸ್ಟ್-2022ರ ಮಾಹೆಯಲ್ಲಿ ನಡೆಯಲಿರುವ ವಾರ್ಷಿಕ ಪದ್ಧತಿಯ ವಿವಿಧ ಪದವಿಯ ಪರೀಕ್ಷೆಗಳ ವಿವರಗಳು ಕೆಳಕಂಡಂತಿರುತ್ತದೆ:

| ಕ್ರಸಂ | ವಿವರುಗಳು | ಅಂತಿಮ ದಿನಾಂಕ |
|---|---|---|
| 1 | ಪರೀಕ್ಷಾ ಶುಲ್ಕ ಪಾವತಿಸಲು ಮತ್ತು ಭರ್ತಿಮಾಡಿದ ಅರ್ಜಿಗಳನ್ನು ಕಾಲೇಜಿಗೆ ಸಲ್ಲಿಸಲು | **30.06.2022** |
| 2 | ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿಗಳನ್ನು ಕಾಲೇಜಿನವರು ಭರ್ತಿ ಮಾಡಲು ಆನ್‌ಲೈನ್‌ನಲ್ಲಿ ನಮೂದಿಸಲು ಸಾಧ್ಯವಾಗಲಿಲ್ಲವೆಂದರೆ ಸದರಿ ಅರ್ಜಿಗಳನ್ನು ಖುದ್ದು, ವ್ಯವಸ್ಥಾಪಕರು, M/S. Meta-I Technologies Pvt. Ltd., ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಹಸ್ತ ನೀಡುವುದು. | **02.07.2022** |
| 3 | ಪರೀಕ್ಷಾ ಶುಲ್ಕವನ್ನು ಡಿ.ಡಿ. ಮೂಲಕ ಪರೀಕ್ಷಾ ಖಾತೆಗೆ ಪರೀಕ್ಷಾ ಖಾತೆ ಸಂಖ್ಯೆ: **54007591200 (Examination Account)** SBI, University Campus, Mysuru ಇವರಿಗೆ ಪಾವತಿಸಿ, ಚಲನ್ ಪ್ರತಿಯನ್ನು ಈ ಕಛೇರಿಗೆ ಕಳುಹಿಸಲು | **05.07.2022** |
| 4 | ಪ್ರವೇಶ ಪತ್ರಗಳ ಮುದ್ರಣದ ನಂತರ ವಿಶ್ವವಿದ್ಯಾನಿಲಯದ ಅನುಮೋದನೆ ಪಡೆಯಲು [ಆನ್‌ಲೈನ್ ಮೂಲಕ ಅಭ್ಯರ್ಥನಾ ಪಟ್ಟಿಯನ್ನು ಮುದ್ರಿಸಿ ಪ್ರಾಂಶುಪಾಲರ ಸಹಿ ಪಡೆದು ಒಂದು ಪ್ರತಿಯನ್ನು ಪ್ರವೇಶ ಪತ್ರಗಳ ಜೊತೆಯಲ್ಲಿ ಕುಲಸಚಿವ (ಪರೀಕ್ಷಾಂಗ) ಅವರಿಗೆ ಸಲ್ಲಿಸಬೇಕು] | **15.07.2022** |
| 5 | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | ಮುಂದೆ ತಿಳಿಸಲಾಗುವುದು |

**ಸೂಚನೆಗಳು:**

1. ಉಲ್ಲೇಖ-2ರನ್ವಯ ವಾರ್ಷಿಕ ಪದ್ಧತಿಯ ಸ್ನಾತಕ ಪದವಿ (UG) ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಈ ಬಾರಿ ನೀಡಿರುವ ಅವಕಾಶ ಅಂತಿಮ ಅವಕಾಶವಾಗಿರುತ್ತದೆ ಹಾಗೂ ಈ ವಿಚಾರವನ್ನು ಕಾಲೇಜಿನವರು ಅನುತ್ತೀರ್ಣಗೊಂಡಿರುವ ವಾರ್ಷಿಕ ಪದ್ಧತಿಯ ವಿದ್ಯಾರ್ಥಿಗಳ ಗಮನಕ್ಕೆ ತರತಕ್ಕದ್ದು.
2. ಪರೀಕ್ಷಾ ಅರ್ಜಿಗಳನ್ನು ಕಾಲೇಜಿನಿಂದ ಪಡೆದು ಭರ್ತಿ ಮಾಡಿ ಕಾಲೇಜಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಬೇಕು. ಕಾಲೇಜಿನವರು ಈ ವಿದ್ಯಾರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿ, ಕುಲಸಚಿವರು(ಪರೀಕ್ಷಾಂಗ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿಗೆ ಸಲ್ಲಿಸಬೇಕು.

3. ಪ್ರಾಯೋಗಿಕ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಗಳು ಆರಂಭವಾಗುವ ಮುನ್ನ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ:13.07.2022ರೊಳಗೆ ನಡೆಸಲು ತಿಳಿಸಲಾಗಿದೆ. ಸದರಿ ಪರೀಕ್ಷೆಗೆ ಬಾಹ್ಯ ಪರೀಕ್ಷಕರು (External Examiners) ಲಭ್ಯವಾಗದ ಸಂದರ್ಭದಲ್ಲಿ ಆಂತರಿಕ ಪರೀಕ್ಷಕರನ್ನೇ ಬಳಸಿಕೊಂಡು ಪರೀಕ್ಷೆ ನಡೆಸುವುದು (Internal Examiners).

4. ಪ್ರಾಯೋಗಿಕ ಪರೀಕ್ಷೆಗಳು ಮುಗಿದ ನಂತರ ಆ ದಿನದಂದೇ Online ಮುಖಾಂತರ ಅಂಕಗಳನ್ನು ಕಡ್ಡಾಯವಾಗಿ ನಮೂದಿಸುವುದು ಹಾಗೂ ಅಂಕಗಳ ಮೂಲಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು.

ಎಲ್ಲಾ ಪದವಿ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಕಾಲೇಜಿನ ಇಂಟರ್‌ನೆಟ್ ಸೌಲಭ್ಯವನ್ನು ಬಳಸಿ ನೇರವಾಗಿ ವಿಶ್ವವಿದ್ಯಾನಿಲಯದ Web Server ಗೆ ಮಾಹಿತಿಯನ್ನು ವರ್ಗಾವಣೆ (Online Transmission) ಮಾಡುವಂತೆ/ ನಮೂದಿಸುವಂತೆ ತಿಳಿಸಲಾಗಿದೆ. ಅನಿವಾರ್ಯ ಕಾರಣದಿಂದಾಗಿ ಕಾಲೇಜಿನಲ್ಲಿ ಇಂಟರ್‌ನೆಟ್ ಸೌಲಭ್ಯವಿಲ್ಲದಿದ್ದ ಪಕ್ಷದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಯಾವುದೇ ಕಂಪ್ಯೂಟರ್ ಕೇಂದ್ರದಿಂದಲೂ ಮಾಹಿತಿ ರವಾನಿಸಬಹುದಾಗಿದೆ.

**ಪರೀಕ್ಷಾ ಶುಲ್ಕಗಳ ದರಗಳು**
(ಪರೀಕ್ಷಾ ಶುಲ್ಕದ ಜೊತೆಗೆ ಅಂಕಪಟ್ಟಿ ಶುಲ್ಕ ರೂ.320/– ಅನ್ನು ಸಹ ಪಾವತಿಸಬೇಕು)

| **B.A./B.Com :** | |
|---|---|
| a. I and II Year whole Examination | Rs.3,520/- |
| b. Per paper with Practical | Rs.2,280/- |
| c. Per paper without Practical | Rs.1,760/- |
| d. III Year whole Examination | Rs.4,240/- |
| e. Per paper with Practical | Rs.2,280/- |
| f. Per paper without Practical | Rs.1,760/- |
| **B.Sc.** | |
| a. I and II Year whole Examination | Rs.3,960/- |
| b. Per paper with Practical | Rs.2,280/- |
| c. Per paper without Practical | Rs.1,760/- |
| d. III Year whole Examination | Rs.4,400/- |
| e. Per paper with Practical | Rs.2,280/- |
| f. Per paper without Practical | Rs.1,760/- |
| **B.B.M** | |
| a.I, II and III Year whole Examination | Rs. 5,200/- |
| b. Per paper with Practical | Rs. 3,080/- |
| c. Per paper without Practical | Rs.1,760/- |

**ವಿಶೇಷ ಸೂಚನೆಗಳು:**

1. ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.
2. ಪ್ರತಿಯೊಬ್ಬ ಅಭ್ಯರ್ಥಿಯೂ ಪ್ರತಿಯೊಂದು ವಾರ್ಷಿಕ ಪರೀಕ್ಷೆಗೆ ಮೇಲೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ಜೊತೆಗೆ ಅಂಕಪಟ್ಟಿ ಶುಲ್ಕ ರೂ.320/–ನ್ನು ಸಹ ಪಾವತಿಸತಕ್ಕದ್ದು. ಪರೀಕ್ಷಾ ಅರ್ಜಿಗೆ ಪ್ರತ್ಯೇಕ ಶುಲ್ಕವಿರುವುದಿಲ್ಲ.
3. **ಪಾವತಿಸಬೇಕಾದ ಒಟ್ಟು ಶುಲ್ಕವನ್ನು ಪರೀಕ್ಷಾ ಖಾತೆ ಸಂಖ್ಯೆ: 54007591200 (Examination Account) ಗೆ DD ಮೂಲಕ Finance Officer, University of Mysore, Mysuru ಇವರ ಹೆಸರಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾನಿಲಯ ಶಾಖೆ, ಮೈಸೂರು ಇಲ್ಲಿ ಸಂದಾಯ ಮಾಡಿ ಮೂಲ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು.**
4. ಅಭ್ಯರ್ಥಿಗಳಿಂದ ನಗದಾಗಿ ಪಡೆದ ಒಟ್ಟು ಶುಲ್ಕಕ್ಕೆ ಮೇಲೆ ತಿಳಿಸಿರುವ ದಿನಾಂಕದೊಳಗಾಗಿ ಡಿಡಿ ಮೂಲಕ ಹಣ ಸಂದಾಯ ಮಾಡಿ ಚಲನ್‌ನ ಪ್ರತಿಯನ್ನು ಕುಲಸಚಿವ (ಪರೀಕ್ಷಾಂಗ) ಇವರಿಗೆ ಕಳುಹಿಸುವ ಜವಾಬ್ದಾರಿ ಕಾಲೇಜಿನ ಪ್ರಾಂಶುಪಾಲರಿಗೆ ಇರುತ್ತದೆ.

5. ವಿಶ್ವವಿದ್ಯಾನಿಲಯಕ್ಕೆ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ಪ್ರತಿ ಪದವಿಯ ವಾರ್ಷಿಕವಾರು ಅಂಕಪಟ್ಟಿ ಶುಲ್ಕ, ಪರೀಕ್ಷಾ ಶುಲ್ಕ ಮತ್ತು ಪದವಿ ಪ್ರಮಾಣಪತ್ರ ಶುಲ್ಕವನ್ನು ಪ್ರತ್ಯೇಕವಾಗಿ ನಮೂದಿಸಿ ವಿವರಣೆಯೊಂದಿಗೆ ಸಲ್ಲಿಸಬೇಕು.
6. ಅಭ್ಯರ್ಥನಾ ಪಟ್ಟಿಯ ಪ್ರತಿಪುಟದಲ್ಲಿ ಒಟ್ಟಾರೆ ಶುಲ್ಕವನ್ನು ಕ್ರೋಢೀಕರಿಸಿ ಅದನ್ನು ಮುಂದಿನ ಪುಟಕ್ಕೆ ಮುಂದುವರೆಸಿ ಕೊನೆಪುಟದಲ್ಲಿ ಒಟ್ಟಾರೆ ಸಂದಾಯವಾಗಬೇಕಿರುವ ಶುಲ್ಕವನ್ನು ನಮೂದಿಸಬೇಕು.
7. ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಆಯಾಯ ಕಾಲೇಜಿನವರು ಪರೀಕ್ಷೆಗಳು ಪ್ರಾರಂಭವಾಗುವುದಕ್ಕೆ ಸಾಕಷ್ಟು ಮುಂಚಿತವಾಗಿ online ಮೂಲಕ ಪಡೆದು, ಕುಲಸಚಿವರು (ಪರೀಕ್ಷಾಂಗ) ಇವರ ಯಥಾಪ್ರತಿ (Facsimile) ಹಾಕಿಸಿಕೊಳ್ಳಬೇಕು ಮತ್ತು ಕುಲಸಚಿವ(ಪ) ಅವರ ಯಥಾಪ್ರತಿ (Facsimile) ಇಲ್ಲದೆ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಿಸಕೂಡದು.
8. ಪರೀಕ್ಷಾ ಶುಲ್ಕವನ್ನು ಪಾವತಿಸಲು ಸಾಕಷ್ಟು ಕಾಲಾವಕಾಶ ನೀಡಿರುವುದರಿಂದ ವಿದ್ಯಾರ್ಥಿಗಳಿಗೆ ಸೂಕ್ತ ತಿಳುವಳಿಕೆ ನೀಡಿ, ನಿಗಧಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಯಾವುದೇ ಕಾರಣಕ್ಕೂ ಪರೀಕ್ಷಾ ಶುಲ್ಕ ಪಾವತಿಸಲು ಹೆಚ್ಚುವರಿ ಕಾಲಾವಕಾಶ ನೀಡಲಾಗುವುದಿಲ್ಲ.

**ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ಲಿಖಿತ ಪರೀಕ್ಷೆಗಳಿಗೆ ಸಂಬಂಧಪಟ್ಟ ವಿವರವಾದ ವೇಳಾಪಟ್ಟಿ ಹಾಗೂ ಪರೀಕ್ಷಾ ಕೇಂದ್ರದ ಕುರಿತು ಈ ಕಛೇರಿಯಿಂದ ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.
2. ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳೂ ನಿಗದಿಪಡಿಸಲಾಗಿರುವ ಕೊನೆಯ ದಿನಾಂಕ ಅಥವಾ ಅದಕ್ಕಿಂತ ಮುಂಚಿತವಾಗಿ ತಾವು ವ್ಯಾಸಂಗ ಮಾಡಿರುವ ಕಾಲೇಜುಗಳಲ್ಲಿಯೇ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು ಮತ್ತು ಪರೀಕ್ಷೆಯ ಅಭ್ಯರ್ಥನಾ ಪತ್ರವನ್ನು ಸಹ ಸಲ್ಲಿಸಬೇಕು. ***ವಿಶ್ವವಿದ್ಯಾನಿಲಯಕ್ಕೆ ನೇರವಾಗಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.***
3. ಪರೀಕ್ಷೆಗಳನ್ನು ಮುಂದೂಡಬೇಕೆಂದು ಬರುವ ಯಾವ ಬಗೆಯ ಮನವಿಯನ್ನು ಯಾವುದೇ ಕಾರಣಕ್ಕೂ ಪುರಸ್ಕರಿಸಲಾಗುವುದಿಲ್ಲ.
4. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಮತ್ತು ಅದನ್ನು ಮುಂದಿನ ಪರೀಕ್ಷೆಗಳಿಗೂ ಸರಿದೂಗಿಸಿಕೊಳ್ಳಲಾಗುವುದಿಲ್ಲ.
5. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಇತ್ತೀಚಿನ ಭಾವಚಿತ್ರದ ಮೇಲೆ ಪೂರ್ತಿ ಸಹಿ ಮಾಡಿ ವಿದ್ಯಾರ್ಥಿಯನ್ನು ಗುರುತಿಸಲಾಗಿದೆ, ಎಂದು ಬರೆಯಿಸಿ ಪ್ರಾಂಶುಪಾಲರಿಂದ ಸಹಿ ಮಾಡಿಸಿ ಅವರ ಪ್ರವೇಶ ಪತ್ರಿಕೆಗೆ ಅಂಟಿಸಿ ಪರೀಕ್ಷಾ ಅರ್ಜಿಯೊಡನೆ ಕಾಲೇಜಿಗೆ ನೀಡಬೇಕು.
6. **ಭಾವಚಿತ್ರಗಳಿಲ್ಲದ ಹಾಗೂ ಕುಲಸಚಿವರು (ಪರೀಕ್ಷಾಂಗ) ಅಥವಾ ಪ್ರಾಂಶುಪಾಲರ ಸಹಿ/ಮೊಹರು ಇಲ್ಲದ ಪ್ರವೇಶಪತ್ರಗಳನ್ನು ಪರೀಕ್ಷಾ ಕೊಠಡಿಯಲ್ಲಿ ಹಾಜರುಪಡಿಸುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಕೇಂದ್ರದ ಪರೀಕ್ಷಾ ಮುಖ್ಯಾಧಿಕಾರಿಗಳು/ವಿಶ್ವವಿದ್ಯಾನಿಲಯದ ಅಧಿಕಾರಿಗಳು ಹಾಗೂ ತನಿಖಾಧಿಕಾರಿಗಳು ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ಕೊಡುವುದಿಲ್ಲ.**
7. ಎಲ್ಲಾ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯ ಜೊತೆಗೆ ತಾವು ಪರೀಕ್ಷೆ ತೆಗೆದುಕೊಂಡಿರುವ ಆಯಾ ವರ್ಷಕ್ಕೆ ಸಂಬಂಧಪಟ್ಟ ಪರೀಕ್ಷೆಗಳ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು.

**ಪ್ರಾಂಶುಪಾಲರುಗಳಿಗೆ ಸಾಮಾನ್ಯ ಸೂಚನೆಗಳು:**

1. ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಮಾಹಿತಿಯನ್ನು Online ಮೂಲಕ ಎಂಟ್ರಿ ಮಾಡಿದ ನಂತರ ಕಾಲೇಜು ಹಂತದಲ್ಲಿಯೇ ಪ್ರವೇಶ ಪತ್ರಗಳನ್ನು ಮುದ್ರಿಸುವ ವ್ಯವಸ್ಥೆಯನ್ನು ಮಾಡಲಾಗುವುದು. ವಿದ್ಯಾರ್ಥಿಗಳ ಹಾಜರಾತಿ ಮತ್ತು ಪ್ರವೇಶಾತಿ ಅನುಮತಿಯನ್ನು ಪ್ರವೇಶಪತ್ರದಲ್ಲಿ ದೃಢೀಕರಿಸಿದ ನಂತರ ಕುಲಸಚಿವ (ಪರೀಕ್ಷಾಂಗ) ಅವರ ಮೇಲುಸಹಿಗಾಗಿ ಪರೀಕ್ಷೆ ಪ್ರಾರಂಭಕ್ಕಿಂತ ಮುಂಚಿತವಾಗಿ ಕಳುಹಿಸಬೇಕು.
2. ಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಮೊಹರು ಮಾಡಿದ ಕವರುಗಳಲ್ಲಿ ಇಟ್ಟು ಕೇಂದ್ರದಲ್ಲಿ ನಡೆಯುವ ಎಲ್ಲಾ ವಿಷಯಗಳ ಪ್ರಾಯೋಗಿಕ (ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ಮುನ್ನ) ಪರೀಕ್ಷೆಗಳು ಮುಗಿದ ಮರು ದಿನವೇ ಕಳುಹಿಸಬೇಕು. ಈ ದಿನಾಂಕ ಮೀರಿ ಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಕಳುಹಿಸುವಂತಹ ಕಾಲೇಜುಗಳಿಗೆ/ಸಂಸ್ಥೆಗಳಿಗೆ ಸೇರಿದ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳು ತಡವಾಗಿ ಪ್ರಕಟವಾಗುವ ಸಂಭವವನ್ನು ತಪ್ಪಿಸಲು ಜಾಗರೂಕರಾಗಿರಲು ಕೋರಲಾಗಿದೆ. ಉತ್ತರ ಪತ್ರಿಕೆಗಳ ಕಟ್ಟುಗಳಲ್ಲಿ (Answer Book Bundles) ಅಂಕಪಟ್ಟಿಗಳನ್ನು ಕಳುಹಿಸಬಾರದೆಂದು ಸೂಚಿಸಲಾಗಿದೆ. ಅಂಕಪಟ್ಟಿಗಳನ್ನು ತಯಾರಿಸುವಾಗ

ವಿದ್ಯಾರ್ಥಿಯ ನೋಂದಣಿ ಸಂಖ್ಯೆಯನ್ನು (Register Number) ಪೂರ್ಣವಾಗಿ ಬರೆಯಬೇಕೆಂಬ ವಿಚಾರವನ್ನು ಎಲ್ಲಾ ಪ್ರಾಯೋಗಿಕ ಅಂಕಗಳ ಪಟ್ಟಿಯನ್ನು ಪ್ರಾಯೋಗಿಕ ಪರೀಕ್ಷಕರಿಗೆ ತಿಳಿಸಬೇಕು ಹಾಗೂ ಸಂಬಂಧಪಟ್ಟ ಪ್ರಾಯೋಗಿಕ ಪತ್ರಿಕೆಯ ನಿಖರವಾದ ಕೋಡ್ ನಂಬರನ್ನು ತಪ್ಪದೆ ಬರೆಯಬೇಕೆಂಬ ವಿಚಾರವನ್ನು ಸಹ ಪ್ರಾಯೋಗಿಕ ಪರೀಕ್ಷಕರಿಗೆ ತಿಳಿಸಬೇಕು. ಪ್ರಾಯೋಗಿಕ ಪರೀಕ್ಷಕರಿಗೆ ಪ್ರಾಯೋಗಿಕ ಅಂಕಗಳ ಪಟ್ಟಿಯನ್ನು (Marks List) ಒದಗಿಸುವುದಕ್ಕಿಂತ ಮೊದಲು ಆಯಾಯಾ ಕೇಂದ್ರದ ಮೊಹರನ್ನು (Seal) ಮಾರ್ಕ್ಸ್ ಲಿಸ್ಟ್‌ನ ಕೆಳಗಡೆ ಮಧ್ಯಭಾಗದಲ್ಲಿ ತಪ್ಪದೆ ಹಾಕಬೇಕು.

3. ವಿದ್ಯಾರ್ಥಿಗಳು ಗೈರುಹಾಜರಾದಲ್ಲಿ ಆ ಪರೀಕ್ಷಾ ದಿನದಂದೇ ಆನ್‌ಲೈನ್ ಮುಖಾಂತರ ಗೈರುಹಾಜರಿಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಕರಡು ಕುಲಸಚಿವ ಪರೀಕ್ಷಾಂಗ)ರವರಿಂದ ಅನುಮೋದಿಸಿದೆ.

10/6/22

ಕುಲಸಚಿವ (ಪರೀಕ್ಷಾಂಗ)

ಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ, ಮೈಸೂರು
5. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿ, ವಾರ್ತಾ ಭವನ, ಎಚ್.ಸಿ.ದಾಸಪ್ಪ ವೃತ್ತ, ಮೈಸೂರು – ಮೇಲ್ಕಂಡ ಪ್ರಕಟಣೆ ಮುಖ್ಯಾಂಶಗಳನ್ನು ಎಲ್ಲಾ ದಿನಪತ್ರಿಕೆಗಳಲ್ಲಿ ಉಚಿತವಾಗಿ ಪ್ರಚಾರ ಮಾಡಲು ಕೋರಿ ಪ್ರತಿ ಕಳುಹಿಸಲಾಗಿದೆ.
6. ನಿರ್ದೇಶಕರು, ಪ್ರಸಾರ ಭಾರತಿ ಕೇಂದ್ರ, ಯಾದವಗಿರಿ, ಮೈಸೂರು – ಈ ಅಧಿಸೂಚನೆಯ ಮುಖ್ಯಾಂಶಗಳನ್ನು ತಮ್ಮ ಬಾನುಲಿ ಹಾಗೂ ಟಿ.ವಿ ವಾಹಿನಿ ಕೇಂದ್ರದಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಹಾಗೆ ಭಿತ್ತರಿಸಲು ಏರ್ಪಾಟನ್ನು ಮಾಡಲು ಕೋರಿದೆ.
7. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ, ಮಾನಸಗಂಗೋತ್ರಿ, ಮೈಸೂರು 570 006.
8. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಉಪಕುಲಸಚಿವರು (ಶೈಕ್ಷಣಿಕ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
11. ಅಧ್ಯಕ್ಷರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು–ಈ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
12. ಸಂಯೋಜನಾಧಿಕಾರಿಗಳು, ಪರೀಕ್ಷಾ ಸುಧಾರಣಾ ಘಟಕ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
13. ಪ್ರಾಜೆಕ್ಟ್ ವ್ಯವಸ್ಥಾಪಕರು, ಮೆಟಾ–ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
14. ಪರೀಕ್ಷಾ ವಿಭಾಗದ ಎಲ್ಲಾ ಅಧೀಕ್ಷಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
15. ಎಲ್ಲಾ ಕಾರ್ಯನಿರ್ವಾಹಕರು (ಸಾಮಾನ್ಯ ವಿಭಾಗ ಮತ್ತು ಸ್ನಾತಕಪದವಿ ವಿಭಾಗ) ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
16. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿ ಅವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
17. ಕಛೇರಿ ಪ್ರತಿ.